

ಭೇಟಿಯ ಹಿಂದೆ ಅಡಗಿತ್ತು. ಮಾತಿಗೆ ಯಾರಾದರೂ ಸಿಕ್ಕಿದರೆಂದರೆ ರಾಯರಿಗೆ ಹಬ್ಬದೂಟ. ಆವಶ್ಯಕತೆಗಿಂತಾ ಹೆಚ್ಚಾಗಿ ತನ್ನಪ್ಪ ಮಾತಾಡುತ್ತಾರೆಂದು ವೈಷ್ಣವಿಯ ದೂರು. ಮೊದಲ ದಿನ ಅವನೆದುರು ವೈಷ್ಣವಿ ಕಾಣಿಸಿಕೊಳ್ಳದಿದ್ದರೂ ರಾಯರ ವಯಸ್ಸನ್ನು ಗಮನಿಸಿ ಠೇವಣಿ ಮುಂದುವರಿಸಲು ಅಗತ್ಯವಾದ ಸಹಿ ಹಾಕಿಸಿಕೊಳ್ಳಲು ಅವಶ್ಯಕ ಫಾರಂಗಳನ್ನು ಹಿಡಿದುಕೊಂಡು ಅವರ ಮನೆಗೇ ಬಂದಾಗ ಅನಿವಾರ್ಯವಾಗಿ ಫಲ್ಗುಣನೆದುರು ಕಾಣಿಸಿಕೊಂಡಿದ್ದಳು ವೈಷ್ಣವಿ, ಸಹಿ ಹಾಕುವ ವ್ಯಾಜದಲ್ಲಿ.

"ನನ್ನ ಮಗಳು ವೈಷ್ಣವಿ" ಪರಿಚಯಿಸಿದ್ದರು ರಾಯರು. ಕ್ಷಣ ಹೊತ್ತು ಪರಸ್ಪರ ಮುಖ ನೋಡಿಕೊಂಡಿದ್ದರೂ ಅದು ಲೋಕಾರೂಢಿಗಷ್ಟೇ ಸೀಮಿತವಾಗಿತ್ತೇ ವಿನಾ ಮತ್ಯಾವ ಭಾವನೆಯೂ ವೈಷ್ಣವಿಯ ಮನಸ್ಸಿನಲ್ಲಿ ಉದ್ಭವಿಸಿರಲಿಲ್ಲ. ಹೌದೇ? ತೀರಾ ಒತ್ತು ಕೊಟ್ಟು ಹಾಗೆ ಹೇಳಿದರೆ ಸುಳ್ಳಾದೀತು. ರಾಷ್ಟ್ರೀಕೃತ ಬ್ಯಾಂಕ್ ಒಂದರ ಮ್ಯಾನೇಜರ್ ಹುದ್ದೆಯಲ್ಲಿದ್ದ ಪ್ರೌಢ ವಯಸ್ಸಿನ ವ್ಯಕ್ತಿ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುವ ವ್ಯಕ್ತಿತ್ವ ಹೊಂದಿದ್ದನೆಂಬುದಕ್ಕೆ ಕಾರಣ ಇಸ್ತ್ರಿಯ ಗೆರೆ ಮಾಸದ ಅವನ ಅಚ್ಚುಕಟ್ಟಿನ ಉಡುಪೋ, ಆರಡಿಯ ನೆಟ್ಟನೆ ನಿಲುವೋ, ಕಣ್ಣುಗಳಲ್ಲಿನ ಲವಲವಿಕೆಯೋ ಅಥವಾ ಒಟ್ಟಂದದಲ್ಲಿದ್ದ ಒಂದು ಅನಿರ್ವಚನೀಯವಾದ ಸೊಬಗೋ, ವೈಷ್ಣವಿಗೆ ಇಂತಾದ್ದೇ ಎಂದು ಬೆಟ್ಟು ಮಾಡಿ ತೋರಿಸಲಾಗದ ಒಂದು ಚುಂಬಕ ಶಕ್ತಿ ಅವನಲ್ಲಿ ಕಂಡಿತ್ತು ಅಂದರೆ ಅತಿಶಯೋಕ್ತಿಯಲ್ಲ. ಆ ದಿನ ತಾನೇ ಕಾಫಿ ತಂದುಕೊಟ್ಟಿದ್ದಳು ವೈಷ್ಣವಿ. ಅವನೆದುರು ಮತ್ತೊಮ್ಮೆ ಸುಳಿದಾಡುವ ಬಯಕೆ ಅಂತರಂಗದಲ್ಲಿ ಚಿಗುರೊಡೆದಿತ್ತೇ? ಇದ್ದೀತು. ಭವಿಷ್ಯದ ಯಾವುದೋ ಘಟನೆಗೆ ವಿಧಿ ಎಷ್ಟೋ